ಸರ್ಕಾರದವರು ನಮಗೆ ೫೦೦೦ ಟಿಲ್ಲಿಜನ್ ಸೆಟ್ಟುಗಳನ್ನು ಮಾತ್ರ ಮಾಡಲು ಲೈಸೆನ್ಸ್ ಕೊಟ್ಟಿದ್ದಾರಾದ್ದರಿಂದ ಇಲ್ಲಿ ಫ್ಯಾಕ್ಟರಿಯವರು ಇನ್ನುಳಿದುದನ್ನು ರೇಡಿಯೋಗಳನ್ನು ಮಾಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆ. ಆದರೆ ಈ ಮಂಡಳಿಯವರು ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಅವರು ಹಣ ಕೊಡತಕ್ಕ ಬಗ್ಗೆ ಮೈಸೂರು ಬ್ಯಾಂಕಿನವರೇನು ಕೆಲವು ಷರತ್ತುಗಳನ್ನು ಹಾಕಿದ್ದಾರೋ ಅವುಗಳನ್ನು ಇವರು ಅಂಗೀಕರಿಸಿದ್ದಾರೆ. ನಾನು ಈಗಾಗಲೆ ನಮ್ಮ ಸರ್ಕಾರದ ಹಣಕಾಸಿನ ಮಾನ್ಯ ಸಚಿವರನ್ನು ಕಂಡು ಮೈಸೂರು ಬ್ಯಾಂಕಿನವರು ಆ ಹಣವನ್ನು ಕೊಡತಕ್ಕ ವಿಚಾರದಲ್ಲಿ ಗ್ಯಾರಂಟಿ ಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೇನೆ. ಈ ಬಗ್ಗೆ ಪರಿಶೀಲನೆಗಳು ನಡೆಯುತ್ತಿವೆ.

ಶ್ರೀ ಬಿ. ವಿ. ಕಕ್ಕಿಲಾಯ.— ಮಾನ್ಯ ಸಚಿವರು ಅಲ್ಲಿ ೧೭೦೦ ಜನರಿಗೂ ಹೆಚ್ಚು ಜನರು ಅಲ್ಲಿ ಕೆಲಸ ಮಾಡುತ್ತಾರೆಂದು ಹೇಳಿದರು. ಆದರೆ ಅವರಿಗೆ ಕೆಲಸ ಕೊಡುವುದಕ್ಕೇ ಬಹಳ ತೊಂದರೆ ಆಗಿದೆ ಅಂದಾಗ ಆ ಕಾರ್ಮಿಕರನ್ನು ಕೆಲಸದಿಂದ ತೆಗೆಯದಂತೆ ಅಲ್ಲೇ ಉಳಿಸಲು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ ಕೃಷ್ಣ.— ನಾನು ಈ ವಿಚಾರದಲ್ಲಿ ಮಾನ್ಯ ಸದಸ್ಯರಿಂದ ಯಾಚನೆಯನ್ನು ಪ್ರಾರ್ಥಿಸುತ್ತಿದ್ದೇನೆ. ಈ ಕಾರ್ಖಾನೆಯ ನಷ್ಟ ೧೯೭೩–೭೪ಕ್ಕೆ ೯೦ ಲಕ್ಷ ಇದ್ದು, ೧೯೭೪–೭೪ಕ್ಕೆ ಇನ್ನೂ ಹೆಚ್ಚಾಗುವ ನಿರೀಕ್ಷಣೆ ಇದೆ. ಇದು ಒಂದು ಕೋಟಿ ರೂಪಾಯಿಗೇರಬಹುದೆಂದು ಅಂದಾಜು ಮಾಡಲಾಗಿದೆ. ಆದುದರಿಂದ ಇದನ್ನು ಹೇಗೆ ಮುಂದುವರಿಸಬೇಕೆಂಬ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಕಳವಳವುಂಟಾಗಿದೆ. ಇದರ ನಷ್ಟವನ್ನು ಭರಿಸುವುದಕ್ಕೆ ಬಹಳ ಕಷ್ಟವಾಗಿದೆ. ಹಿಂದೆ ಒಂದಾವರ್ತಿ ಸಕ್ಕರೆ ಕಾರ್ಖಾನೆಯಲ್ಲಿ ಸಹಾ ಇದೇ ತೊಂದರೆ ಉಂಟಾಗಿದ್ದಾಗ ಅಲ್ಲಿ ಕೆಲಸ ಮಾಡುತ್ತಿದ್ದ ೩೦೦೦ ಜನರಲ್ಲಿ ೧೬೦೦ ಜನರು ತಾವಾಗೇ ಮುಂದೆ ಬಂದು ವಾಲಂಟಿಯರಾಗಿ ನಿವೃತ್ತಿ ಹೊಂದುವುದಕ್ಕೆ ಅವರ ಅಭಿಲಾಷೆಯನ್ನು ವ್ಯಕ್ತಪಡಿಸಿ ಅಲ್ಲಿಯ ಕೆಲಸಗಳಿಗೆ ಒಂದು ಅನುವನ್ನು ಮಾಡಿಕೊಟ್ಟರು. ಅದರಂತೆ ಇಲ್ಲಿಯೂ ಕೂಡ ಕೆಲಸಗಾರರ ಸಂಖ್ಯೆಯನ್ನು ತಗ್ಗಿಸಿ ಇದನ್ನು ಒಂದು ಭದ್ರವಾದ ತಳಹದಿಯ ಮೇಲೆ ನಿಲ್ಲುವಂತೆ ಮಾಡತಕ್ಕ ಆಲೋಚನೆಗಳು ನಡೆಯುತ್ತಿವೆ. ಅದರಲ್ಲಿ ಈ ವಾಲಂಟಿಯರಾಗಿ ಕೆಲವರನ್ನು ನಿವೃತ್ತಿ ಮಾಡಬೇಕೆಂಬ ಆಲೋಚನೆಯೂ ಕೂಡ ಒಂದಾಗಿದೆ.

1–30 P.M.

## VILLAGES ELECTRIFIED IN SHAHAPUR AND SHORAPUR TALUKS

246. Sri BAPU GOWDA RAYAPPA (Shahapur).—Will the Minister for Public Works and Electricity be pleased to state:

a) the number of villages electrified in Shahapur and Shorapur Taluks (Names of villages may be given Talukwise);

b) the number of villages in the above taluks proposed to be electrified during the financial year 1973–74 (Names of villages to be electrified may be given talukwisie)?

Sri H. M. CHANNABASAPPA (Minister for Public Works and Electricity).—

a) 75 villages and 7 Hamlets as on 31–7–1973 as indicated in Statement I placed on the Table of the House*

b) 47 villages as indicated in Statement II placed on the Table of the House*

ಶ್ರೀ ಬಾಪುಗೌಡ ರಾಯಪ್ಪ.—(ಅ)ಗೆ ಕೊಟ್ಟಿರುವ ಉತ್ತರದ ಪ್ರಕಾರ ನೋಡಿದರೆ ಷಹಾಪುರ ತಾಲ್ಲೂಕಿನಲ್ಲಿ ೩೮ ಹಳ್ಳಿಗಳಲ್ಲೂ ಷೊರಾಪುರ ತಾಲ್ಲೂಕಿನಲ್ಲಿ ೪೭ ಹಳ್ಳಿಗಳಲ್ಲೂ ವಿದ್ಯುಚ್ಛಕ್ತಿ ಸರಬರಾಜು ಆಗಿಲ್ಲ, ಇನ್ನೂ ಕೆಲವಾರು ಹಳ್ಳಿಗಳಿಗೆ ಇದುವರೆಗೂ ಅಲ್ಲಿ ಎಲೆಕ್ಟ್ರಿಫಿಕೇಷನ್ ಆಗಿಲ್ಲ. ಆದ್ದರಿಂದ ಎಷ್ಟು ಅವಧಿಯಲ್ಲಿ ಈ ಎಲ್ಲ ಗ್ರಾಮಗಳಿಗೂ ಎಲೆಕ್ಟ್ರಿಫಿಕೇಷನ್ ಮಾಡತಕ್ಕ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೀರಿ ?

†ಶ್ರೀ ಎಚ್. ಎಂ. ಚನ್ನಬಸಪ್ಪ — ಈ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕದ್ದು ಬರೀ ಸರ್ಕಾರವನ್ನಾಗಲಿ ಅಥವಾ ವಿದ್ಯುಚ್ಛಕ್ತಿ ಮಂಡಳಿಯನ್ನಾಗಲಿ ಅವಲಂಬಿಸಿರುವುದಿಲ್ಲ. ಯಾರ್ಯಾರು ವಿದ್ಯುಚ್ಛಕ್ತಿಯನ್ನು ಪಡೆಯಬೇಕೆಂದು ಇಚ್ಛೆ ಪಡುತ್ತಾರೋ ಅವರ ಕರ್ತವ್ಯಗಳೂ ಕೆಲವು ಇವೆ. ಆ ಎಲ್ಲ ಕರ್ತವ್ಯಗಳನ್ನು ಅವರು ಪೂರೈಸಿದರೆ, ಆಗ ಇದನ್ನು ಎಷ್ಟು ದಿವಸಗಳಲ್ಲಿ ಪೂರೈಸುವ ದಕ್ಕಾಗುತ್ತದೆಂದು ಉತ್ತರ ಹೇಳಬಲ್ಲೆ. ಅದಲ್ಲದೆ ಮುಂದೆ ಈಗಿನ ಒಟ್ಟು ಅಂದಾಜಿನಲ್ಲಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂಬ ಯೋಜನೆ ಇದೆ. ಅದಕ್ಕಾಗಿ ಗ್ರಾಮಸ್ಥರೆಲ್ಲರೂ ಕೂಡ ಸಹಕರಿಸಬೇಕು. ಹಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಅದು ಬಿಟ್ಟು ಹೇಗಾದರೂ ಸರ್ಕಾರ ನಮಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತದೆಂದು ಗ್ರಾಮಸ್ಥರು ಕೈ ಕಟ್ಟಿಕೊಂಡು ಕೂತರೆ ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಕೊಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಬಾಪುಗೌಡ ರಾಯಪ್ಪ.—ಹೈದರಾಬಾದ ಕರ್ನಾಟಕದಲ್ಲಿರತಕ್ಕ ಹಳ್ಳಿಗಳು ಒಂದೂರಿನಿಂದ ಇನ್ನೊಂದು ಊರಿಗೆ ಸುಮಾರು ೩–೪ ಮೈಲಿಗಳ ಅಂತರದಲ್ಲಿವೆ. ಆದರೆ ನಮ್ಮ ಭಾಗದಲ್ಲಿ ಬಹಳ ಹತ್ತಿರದಲ್ಲಿರುತ್ತವೆ. ಇಲ್ಲಿ ಹಾಕತಕ್ಕ ಸಬ್

*Copy placed in the Mysore Legislature Library *vide* No. 18 / dated 25–9–73.

ಟ್ರಾನ್ಸ್‌ಮಿಷನ್ ಲೈನಿಗೆ ಮಿನಿಮಂ ಖರ್ಚು ವಿಧಿಸಬೇಕು. ಆಗ ಮಾತ್ರ ಎಲ್ಲರೂ ಹೆಚ್ಚಿಗೆ ಸಹಕಾರ ಕೊಡಬಹುದು. ಆದ್ದರಿಂದ ಸರ್ಕಾರದವರು ಅಲ್ಲಿ ಅಗತಕ್ಕ ಖರ್ಚನ್ನು ಮಿತಿಗೊಳಿಸಿ ಅದನ್ನು ಆದಷ್ಟು ಕಡಿಮೆಮಾಡಿ ತೀವ್ರಗತಿಯಿಂದ ಈ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಕೊಡುವ ಯೋಜನೆಯನ್ನು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಯಮಾವಳಿಗಳನ್ನು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಸಡಿಲ ಪಡಿಸುವುದಿದಕ್ಕಾಗುವುದಿಲ್ಲ. ಸುಮಾರು ೧ ಕೋಟಿ ೬೦ ಲಕ್ಷ ರೂಪಾಯಿಗಳ ಖರ್ಚು ಇದಕ್ಕಾಗಿ ಆಗುತ್ತದೆ. ಸಬ್‌ಟ್ರಾನ್ಸ್‌ಮಿಷನ್ ಲೈನುಗಳನ್ನು ಎಲ್ಲೆಲ್ಲಿ ಕೇ ಪೊಜಿಷನ್ ಇದೆಯೋ ಆಲ್ಲಿ ಡ್ರಾ ಮಾಡಬೇಕೆಂದು ಈಗಾಗಲೇ ಸರ್ಕಾರದವರು ಹುಕುಂ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಈಗಾಗಲೇ ಸರ್ಕಾರದವರು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಅದರ ಖರ್ಚು ಸ್ವಲ್ಪ ಮಟ್ಟಿಗೆ ಗ್ರಾಮಸ್ಥರ ಮೇಲೆ ಬಿದ್ದಿದ್ದರೆ ಈಷ್ಟು ಹೆಚ್ಚಿಗೆ ವೆಚ್ಚವಾಗುತ್ತಿರಲಿಲ್ಲ. ಅಷ್ಟು ವರ್ಕ ಜೌಟ್ ಆಗುತ್ತಲೂ ಇರಲಿಲ್ಲ. ಈಗ ಮುಂದೆ ಎಲ್ಲ ಹಳ್ಳಿಗಳಿಗೂ ಅನುಕೂಲವಾಗುವಂತೆ ಸಬ್ ಟ್ರಾನ್ಸ್‌ಮಿಷನ್ ಲೈನುಗಳನ್ನು ಎಳೆದಮೇಲೆ ಸ್ವಲ್ಪ ಮಟ್ಟಿಗೆ ಆ ಗ್ರಾಮಗಳಲ್ಲಿ ಸುಧಾರಣೆಯಾಗುತ್ತದೆ, ಹಾಗೂ ಸುಲಭವಾಗುತ್ತದೆ. ಅದರ ಜೊತೆಗೆ ಎಲ್ಲೆಲ್ಲಿ ಸಬ್ ಟ್ರಾನ್ಸ್‌ಮಿಷನ್ ಲೈನುಗಳನ್ನು ಎಳೆಯಬೇಕು, ಯಾವ್ಯಾವ ಹಳ್ಳಿಗಳಿಗೆ ಆ ಲೈನುಗಳು ಹೋಗಬೇಕೆಂಬುದನ್ನು ಸರ್ಕಾರಕ್ಕೆ ತಿಳಿಸಿದರೆ ಒಳ್ಳೆಯದು. ಇವತ್ತಿನ ದಿವಸ ರೋಡ ಸರ್ವೆ ಫಾರಂಗಳನ್ನು ಫಿಲಪ್ ಮಾಡುವಾಗ ಈ ಲೈನ್‌ಗಳನ್ನು ಎಲ್ಲೆಲ್ಲಿ ಎಳೆದರೆ ಕೈಗಾರಿಕೆಗಳಿಗೆ, ಹಳ್ಳಿಗಳಿಗೆ ಹಾಗೂ ವ್ಯವಸಾಯಕ್ಕೆ ಅನುಕೂಲವಾಗುತ್ತದೆಂಬ ಅಂಶಗಳನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ. ಅಗತ್ಯವಾಗಿ ಅದರ ಪ್ರಕಾರ ಆದಷ್ಟು ಜಾಗ್ರತೆ ಆಯಾ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಅನುಕೂಲವಾಗುತ್ತದೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಇಂಜನಿಯರ್ಸ್ ಈಗ ಮುಷ್ಕರವನ್ನು ನಡೆಸುತ್ತಾ ಇರುವುದರಿಂದ ಇಲ್ಲಿ ಎಲೆಕ್ಟ್ರಿಫಿಕೇಷನ್ ಕೆಲಸ ನಿಂತುಹೋಗಿದೆ. ಆದ್ದರಿಂದ ಅವನ್ನು ಯಾವಾಗ ಸರಿಪಡಿಸುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಎಲೆಕ್ಟ್ರಿಫಿಕೇಷನ್ ಕೆಲಸ ನಿಂತು ಹೋಗಿದೆಯೆಂದು ಮಾನ್ಯ ಸದಸ್ಯರು ತಿಳಿದಿರುವುದು ತಪ್ಪು.